ದಾಂಪತ್ಯದಲ್ಲಿನ ಕಲಹದಿಂದ ಸಮಾಜಘಾತುಕ ಮಕ್ಕಳು ರೂಪುಗೊಳ್ಳುತ್ತಾರೆಯೋ ಇಲ್ಲವೋ ಹೇಳುವುದು ಕಷ್ಟ. ಆದರೆ, ಆ ಕಲಹದಿಂದ ಮಕ್ಕಳ ಮನಸ್ಸು ಕ್ಷೋಭೆಗೊಳ್ಳುವುದಂತೂ ನಿಜ. ಆ ಕ್ಷೋಭೆ ಮಕ್ಕಳು ಬೆಳೆದಮೇಲೆಯೂ ಅವರನ್ನು ಸುಡತೊಡಗಿ, ಬದುಕನ್ನು ಯಾತನಾಮಯಗೊಳಿಸುತ್ತದೆ. ಆ ತಲ್ಲಣ ಮತ್ತೊಂದು ತಲೆಮಾರಿಗೂ ವರ್ಗಾವಣೆಯಾಗುತ್ತದೆ.

ಪ್ರತಿಯೊಂದು ಮಗುವಿನ ಭಾವಕೋಶಗಳಲ್ಲಿಯೂ ಸಂಬಂಧಗಳಿಗೆಂದೇ ಜಾಗವಿದೆ. ಅಲ್ಲಿ 'ಅಪ್ಪ' ಎಂಬ ಭಾವಕೋಶಗಳ ಚೌಕಟ್ಟಿನಲ್ಲಿ ಬೇರೆ ಚಿತ್ರಪಟವನ್ನು ತಂದು ಕೂರಿಸುವುದು ಸಾಧ್ಯವಿಲ್ಲ. 'ಅಮ್ಮ' ಎಂಬ ಕೋಶವಲಯದಲ್ಲಿ ಮತ್ತೊಂದು ಮುಖವನ್ನು ಅಳವಡಿಸುವುದು ಸಾಧ್ಯವಿಲ್ಲ. ಬಾಳುವೆಗಾಗಿ ಕೆಲವು ರೀತಿಯ ಹೊಂದಾಣಿಕೆ ಆಗಬಹುದೇ ಹೊರತು, ಈ ಎರಡು ಸ್ಥಾನಗಳನ್ನು ಹೇಗೆ ಹೇಗೋ ತುಂಬುವುದಂತೂ ಸಾಧ್ಯವಿಲ್ಲ.

## ಮಗುವಿನ ದೃಷ್ಟಿಕೋನ

ದಂಪತಿಯ ಹೆಗಲ ಮೇಲೆ ಕುಟುಂಬದ ಜವಾಬ್ದಾರಿ ಹೆಚ್ಚುತ್ತಾ ಹೋದಂತೆ ಅದು ಅನೇಕ ತ್ಯಾಗಗಳನ್ನು ಬೇಡುತ್ತದೆ. ಪರಸ್ಪರರು ತ್ಯಾಗವನ್ನು ಬಯಸುವುದು ಅನಿವಾರ್ಯವೂ ಆಗಿರುತ್ತದೆ. ಸಂಗಾತಿಯ ಋಣಾತ್ಮಕ ಗುಣಗಳನ್ನು ಅರಗಿಸಿಕೊಳ್ಳುವುದಕ್ಕೆ ಮನಸ್ಸನ್ನು ಸಿದ್ಧ ಮಾಡಿಕೊಳ್ಳುವುದು ಸವಾಲೂ ಹೌದು. ಅವೆಲ್ಲವನ್ನೂ ನಿಭಾಯಿಸುವ ವೇಳೆಗೆ ಹೆಂಡತಿಯ ಮೇಲೆ ಸಿಟ್ಟು, ಅಥವಾ ಗಂಡನ ಮೇಲಿನ ಸಿಟ್ಟಿನ ಕಂದಕ ಬಿಗಡಾಯಿಸುತ್ತಾ ಹೋಗಬಹುದು. ಇದೇ ಬಿರುಕು, ಕೊನೆಗೆ ಮಗುವಿನ ಬಳಿ – 'ನೋಡು ನಿನ್ನಪ್ಪ ಎಂಥ ಕ್ರೂರಿ ಮನುಷ್ಯ, ನನಗೆ ಹೀಗೆಲ್ಲ ಅನ್ಯಾಯ ಮಾಡಿದ್ದಾನೆ...' ಎನ್ನುತ್ತ ಅಪ್ಪನ ಚಿತ್ರದ ಮೇಲೆ ಮಸಿ ಚೆಲ್ಲಿಬಿಡುವಂತೆ ಪ್ರೇರೇಪಿಸುತ್ತದೆ.

'ಈ ನಿನ್ನ ಅಮ್ಮನೋ ಕಿಂಚಿತ್ ಬುದ್ಧಿ ಇಲ್ಲದ ಮೊದ್ದು' ಎನ್ನುವ ಭಾವನೆಯಲ್ಲಿಯೇ ಮಗುವಿನೊಂದಿಗೆ ಅಪ್ಪ ವ್ಯವಹರಿಸಲು ಶುರು ಮಾಡಿದಾಗ ಅಮ್ಮನ ಕುರಿತು ಮಗು ಕಟ್ಟಿಕೊಂಡ ಆಪ್ತಚಿತ್ರದಲ್ಲಿ ಪುಟ್ಟ ಗೀರುಗಳು ಮೂಡಿಬಿಡುತ್ತವೆ. ಈ ಬಿರುಕುಗಳನ್ನೋ ಗೀರುಗಳನ್ನೋ ಮುಚ್ಚಬೇಕಾದರೆ 'ಗಂಡ ಹೆಂಡತಿ'ಯ ಪಟ್ಟದಿಂದ ಕೆಳಗಿಳಿದು, ಅಪ್ಪ ಅಮ್ಮನ ಪಟ್ಟವನ್ನು ಅಲಂಕರಿಸುವುದು ಅತೀ



# ಪೇರೆಂಟಿಂಗ್ ಎಂದರೆ ಗಿಡ ನೆಟ್ಟಂತೆ



ಇತ್ತೀಚೆಗೆ ಪೇರೆಂಟಿಂಗ್ ಎಂಬ ಪರಿಕಲ್ಪನೆ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ನಡುವೆ ಹೆಚ್ಚು ಕೇಳಿಬರುತ್ತಿದೆ. ಮಗುವನ್ನು ಸ್ವಾಗತಿಸುವ ಮುನ್ನ ಅಪ್ಪ ಅಮ್ಮನ ಮನಸ್ಥಿತಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿಯೂ ಹೆಚ್ಚಿನ ದಂಪತಿ ಪೇರೆಂಟಿಂಗ್ ತರಗತಿಗಳಿಗೆ ಹಾಜರಾಗುವುದುಂಟು. ದುಡಿಯುವ ವರ್ಗದ ಪಾಲಕರಿಗೆ ಇಂತಹ ತರಗತಿಗಳಿಗೆ ಹಾಜರಾಗುವುದೂ ಸಾಧ್ಯವಾಗುವುದಿಲ್ಲ. ತರಗತಿಗಳಲ್ಲಿ ಪಾಲಕರ ಜವಾಬ್ದಾರಿಯನ್ನು ವಿವರಿಸುವುದಷ್ಟೇ ಅಲ್ಲ, ಮಗುವಿನ ದೃಷ್ಟಿಕೋನದಿಂದ ನೋಡುವುದನ್ನೂ ಹೇಳಿಕೊಡಲಾಗುತ್ತದೆ. ಉದಾಹರಣೆಗೆ, ಪತ್ನಿಯ ಹೆರಿಗೆ ಸಮಯದಲ್ಲಿ ತಂದೆ ಉಪಸ್ಥಿತಿ ಅಥವಾ ಮಗುವಿನ ಕೆಲಸಗಳನ್ನು ಅಪ್ಪನೂ ನಿಭಾಯಿಸುವುದಷ್ಟೇ ಪೇರೆಂಟಿಂಗ್‌ನ ಸಮಾನ ಹಂಚಿಕೆಯಲ್ಲ. ಮಗು ಬೆಳೆಯುವಾಗ ಅಮ್ಮನ ಕುರಿತು ಒಳ್ಳೆಯ ಭಾವನೆ ಮೂಡಿಸುವಂತೆ ಮಾತುಗಳನ್ನು ಹೇಳುವ ಜವಾಬ್ದಾರಿ ಅಪ್ಪನದ್ದು. ಅಪ್ಪನ ಕುರಿತು ಸಕಾರಾತ್ಮಕ ಭಾವನೆ ಮೂಡಿಸುವ ಜವಾಬ್ದಾರಿ ಅಮ್ಮನದ್ದು. ಹೀಗಾದಾಗ ಅದರ ಪ್ರಯೋಜನ ಅಪ್ಪನಿಗೋ, ಅಮ್ಮನಿಗೋ ಆಗುವುದಷ್ಟೇ ಅಲ್ಲ, ಮಗು ಸಮಾಜದಲ್ಲಿ ಎಲ್ಲವನ್ನೂ ಒಳಗೊಂಡು ಬಾಳುವುದನ್ನು ಕಲಿಯುತ್ತದೆ. ಮಗುವಿನ ವಿವೇಕ ಪ್ರಜ್ಞೆ ವಿಕಾಸವಾಗುತ್ತದೆ.

ಅಂತಿಮವಾಗಿ ಮನುಷ್ಯನೊಬ್ಬ ವಿವೇಕಯುತವಾಗಿ ಸಮಾಜದಲ್ಲಿ ಜೀವನ ಮಾಡುವಂತೆ ಆತನನ್ನು ರೂಪಿಸುವುದೇ ಪೇರೆಂಟಿಂಗ್. ಅದರ ಹೊರತಾಗಿ ಅಪ್ಪ ಅಮ್ಮ ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುವ ಅತಿವಿಧೇಯ ಮಕ್ಕಳನ್ನು ರೂಪಿಸಿದರೆ ಅದು ಯಶಸ್ವಿ ಪೇರೆಂಟಿಂಗ್ ಅನಿಸಿಕೊಳ್ಳುವುದಿಲ್ಲ.

ಪೇರೆಂಟಿಂಗ್ ಇತ್ತೀಚಿಗಿನ ಕಲ್ಪನೆ. ಈ ಕಾಲದ ದಂಪತಿ ಬೆಳೆಸುವ ಮಕ್ಕಳು ಸುಮಾರು 20 ವರ್ಷಗಳಲ್ಲಿ ದೊಡ್ಡವರಾಗಿ ಸೃಷ್ಟಿಯಾಗುವ ಸಮಾಜದಲ್ಲಿ, ಪೋಷಕರು ಬಹಳ ತಾಳ್ಮೆಯಿಂದ ಮಕ್ಕಳನ್ನು ಬೆಳೆಸುವವರಾಗಿ ರೂಪುಗೊಳ್ಳಬಹುದೇನೊ. ಇಂದು ಗಿಡವನ್ನು ನೆಟ್ಟರೆ ಹತ್ತಾರು ವರ್ಷಗಳ ಬಳಿಕ ನೆರಳು ಕೊಡುವಂತೆ ಈ ಪ್ರಕ್ರಿಯೆಯೂ ಬಹಳ ದೀರ್ಘವಾದುದು.

**-ಅಂಜಲಿ ರಾಮಣ್ಣ**, ಲೇಖಕಿ/ ವಕೀಲರು